# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 362

ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 10.12.2025

ಉತ್ತರಿಸಬೇಕಾದ ಸಚಿವರು : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಾಂಸಕ್ಕಾಗಿ ಯಾವ ಯಾವ ರೀತಿಯ ಕೋಳಿಗಳನ್ನು ಬೆಳಸಲಾಗುತ್ತಿದೆ; ಸದರಿ ಕೋಳಿಗಳಲ್ಲಿರುವ ವೈವಿಧ್ಯಗಳೇನು; | ರಾಜ್ಯದಲ್ಲಿ ಮಾಂಸಕ್ಕಾಗಿ ವೆಂಕಾಬ್, ಬೀಕಾಬ್, ಸುಗುಣ, ಐಬಿ ತಳಿಗಳ ಕೋಳಿಗಳನ್ನು ಬೆಳೆಸಲಾಗುತ್ತದೆ.<br><br>ಇವುಗಳ ವೈವಿದ್ಯತೆಯೆಂದರೆ ಇವುಗಳು 6 ವಾರಗಳಲ್ಲಿ 3 ಕೆ.ಜಿ ಆಹಾರ ತಿಂದು ಅಂದಾಜು 2 ರಿಂದ 2.5 ಕೆ.ಜಿ. ಮಾಂಸವನ್ನು ನೀಡುತ್ತವೆ. |
| ಆ) | ಮಾಂಸದ ಕೋಳಿಗಳು ವೈಜ್ಞಾನಿಕವಾಗಿ ಬೆಳೆಯಲು ಯಾವ ಯಾವ ಕೋಳಿ ತಳಿಗಳು ಎಷ್ಟು ಸಮಯ ತಗಲುತ್ತಿದೆ;(ವಿವರ ಒದಗಿಸುವುದು) | ವೆಂಕಾಬ್, ಬೀಕಾಬ್, ಸುಗುಣ, ಐಬಿ ಮಾಂಸದ ಕೋಳಿಗಳು ವೈಜ್ಞಾನಿಕವಾಗಿ ಬೆಳೆಯಲು 36 ರಿಂದ 42 ದಿನಗಳು ಬೇಕಾಗುತ್ತವೆ. |
| ಇ) | ಮಾಂಸದ ಕೋಳಿಗಳ ಬೆಳವಣಿಗೆಯನ್ನು ಅಲ್ಪಾವಧಿಯಲ್ಲಿ ತೂಕ ಹೆಚ್ಚಾಗುವಂತೆ ಮಾಡಲು ವಿವಿಧ ರೀತಿಯ ಹಾರ್ಮೋನ್ ಚುಚ್ಚು ಮದ್ದುಗಳನ್ನು ನೀಡುತ್ತಿರುವುದನ್ನು ಸರ್ಕಾರ ಯಾವ ರೀತಿ ಗಮನಿಸುತ್ತಿದೆ: ಇದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಈ ತಳಿಗಳಿಗೆ ಯಾವುದೇ ರೀತಿಯ ಹಾರ್ಮೋನ್ ಚುಚ್ಚು ಮದ್ದುಗಳನ್ನು ಬಳಸುತ್ತಿಲ್ಲ. ಇವೆಲ್ಲವೂ ಅನುವಂಶಿಕವಾಗಿ (ಜೆನಿಟಿಕಲ್) ಉತ್ತಮ ತಳಿಗಳಾಗಿದ್ದು, ಉತ್ಕೃಷ್ಟ ಸಮತೋಲನ ಆಹಾರ ಕೊಡುವುದರಿಂದ ಹಾಗೂ ಉತ್ತಮ ನಿರ್ವಹಣೆಯಿಂದ ಹೆಚ್ಚಿನ ಪ್ರಮಾಣದ ಮಾಂಸ ಉತ್ಪಾದನೆಯಾಗುತ್ತದೆ. |
| ಈ) | ಈ ರೀತಿಯ ಹಾರ್ಮೋನ್ ಚುಚ್ಚು ಮದ್ದುಗಳನ್ನು ಪಡೆದಿರುವ ಕೋಳಿ ಮಾಂಸವನ್ನು ತಿನ್ನುವುದರಿಂದ ಜನರ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗುತ್ತಿದೆ; ಇದನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು? | ಅನ್ವಯಿಸುವುದಿಲ್ಲ |

**ಸಂಖ್ಯೆ:ಪಸಂಮೀ 256 ಸಲೆವಿ 2025**

**(ಕೆ. ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು